JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಗಾಂಧೀಜಿಯವರ ಸ್ವದೇಶಿ ಮತ್ತು ಖಾದಿ

**Dharanendra Kumari.H.R**
**Assistant Professor**
**Department of History**
**Government First Grade College**
**of Arts, Science & Commerce-Sira-572137**

ಮೋಹನ್ ದಾಸ್ ಕರಮಚಂದ ಗಾಂಧಿ ಅವರು ಮಹಾತ್ಮರೆಂದೇ ಖ್ಯಾತರಾಗಿದ್ದು . ನನ್ನ ಜೀವನವೇ ನನ್ನ ಸಂದೇಶ ಎಂದಿರುವ ಗಾಂಧೀಜಿಯವರ ಚಿಂತನೆ ಮತ್ತು ಆಲೋಚನೆ ಶ್ರಮವನ್ನು ಒಳಗೊಂಡಿದೆ. ಅದ್ಭುತ ಸಂಘಟಕರಾಗಿದ್ದು, ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ಮಾಡಿದ ವ್ಯಕ್ತಿ. ಶಾಂತಿ, ಸತ್ಯ, ಆಹಿಂಸೆ, ಸತ್ಯಾಗ್ರಹ, ಸ್ವದೇಶಿ ಹಾಗೂ ಖಾದಿ ತತ್ವಗಳ ಮೂಲಕ ಭಾರತೀಯರನ್ನು ಬಡಿದೆಬ್ಬಿಸಿದ ಚೇತನ. ಸುಮಾರು ಐದು ದಶಕಗಳ ಕಾಲ ಭಾರತದ ವಿಮೋಚನೆಗಾಗಿ ಹೋರಾಟ ಮಾಡಿದರು. ರಾಜಕೀಯ ಸ್ವಾತಂತ್ರ್ಯವಷ್ಟೇ ಅಲ್ಲದೆ ಮಾನವ ಸಮಾನತೆ, ದೌರ್ಜನ್ಯ, ಅನ್ಯಾಯ, ಮತ್ತು ಹಿಂಸಾ ವಿರೋಧಿ ತತ್ವಗಳನ್ನು ಈ ಹೋರಾಟ ಹೊಂದಿತ್ತು. ಇಂದಿಗೂ ಜಗತ್ತಿನ ಮಹಾನ್ ನಾಯಕರುಗಳಿಗೆ ಹಾಗೂ ಕ್ರಾಂತಿಕಾರರ ಬದಲಾವಣೆಗಳಿಗೆ ಗಾಂಧೀಜಿಯ ತತ್ವಗಳು ಸ್ಪರ್ತಿದಾಯಕವಾಗಿವೆ ಅವರ ತತ್ವ ಚಿಂತನೆಗಳು, ಸತ್ಯ ಆರ್ದ್ಶಗಳು ರ್ವಕಾಲಿಕ ಹಾಗೂ ಅನುಕರಣೆಯವಾಗಿದೆ. ಸ್ವದೇಶಿ ತತ್ವ ಭಾರತವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸುವ ಹೋರಾಟದ ಒಂದು ಭಾಗ ಹಾಗೂ ವಿದೇಶಿಯರ ವಿರುದ್ಧ ರಾಷ್ಟ್ರೀಯತೆಯ ಕಿಚ್ಚನ್ನು ಹಚ್ಚಿದ್ದಷ್ಟೆ ಅಲ್ಲದೆ, ಸ್ವದೇಶಿ ತತ್ವಗಳ ಅನುಷ್ಠಾನದ ಮೂಲಕ ಭಾರತದ ರ್ಥಿಕ ಏಳಿಗೆಯ ಜೊತೆಗೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವ ಮೂಲಕ ದೇಶಿಯ ಉತ್ಪಾದನೆಗೆ ಉತ್ತೇಜನ ನೀಡುವುದಾಗಿತ್ತು.

ಗಾಂಧಿ ಪರ್ವದಲ್ಲಿ ದಾದಾಬಾಯಿ ನವರೋಜಿ, ಗೋಖಲೆ, ರಾನಡೆ, ತಿಲಕ್, ಜೀ.ಬಿ ಜೋಷಿ ಮೊದಲಾದ ರವರು ದೇಶಿಯ ಸಂಪತ್ತು ವಿದೇಶಗಳಿಗೆ ಹರಿದು ಹೋಗುತ್ತಿರುವುದರ ಬಗ್ಗೆ ಪ್ರಚಾರ ಮಾಡಿದರು. ನಂತರ 1905 ರಲ್ಲಿ ರ್ಜನ್ ಬಂಗಾಳ ವಿಭಜನೆಯನ್ನು ಮಾಡಿದ್ದರಿಂದ ಆರಂಭವಾದ ವಿದೇಶಿ ವಿರೋಧಿ ತಿಳುವಳಿ ಸ್ವದೇಶಿ ಮತ್ತು ಬಹಿಷ್ಕಾರ ಆಂದೋಲನದ ರೂಪ ಪಡೆಯಿತು. ಪರಿಣಾಮವಾಗಿ ಬಂಗಾಳ ವಿಭಜನೆಯನ್ನು 1911 ರಲ್ಲಿ ರದ್ದು ಪಡಿಸಿ ಬಂಗಾಳವನ್ನು ಒಗ್ಗೂಡಿಸುವಲ್ಲಿ ಅರವಿಂದ್ ಘೋಷ್ ಲೋಕಮಾನ್ಯ ಬಾಲಗಂಗಾಧರ ತಿಲಕ್ ವಿಪಿನ್ ಚಂದ್ರ ಪಾಲ್ ಮತ್ತು ಲಾಲ ಲಜಪತರಾಯರು ಕಂಡ ಯಶಸ್ಸು ಗಾಂಧೀಜಿ ಸ್ವದೇಶಿ ಆಂದೋಲನದತ್ತ ಸಾಗಲು ಪ್ರೇರಣೆಯಾಯಿತು ಸ್ವದೇಶಿಯನ್ನು ಗಾಂಧೀ " ಸ್ವರಾಜ್ಯದ ಆತ್ಮ ಮತ್ತು ಸ್ವರಾಜ್ಯದ ಕೀಲಿಕೈ " ಎಂದು ಬಣ್ಣಿಸಿದ್ದಾರೆ.

ಸ್ವದೇಶಿ ಮತ್ತು ಖಾದಿ ಗಾಂಧಿಯವರ ಹೋರಾಟದ ತಂತ್ರವಾಗಿದ್ದು, ಅದು ಅಂತರಂಗದ ಒಂದು ಭಾವನೆ. ದೂರದನ್ನು ಬಿಟ್ಟು ನಮ್ಮ ಹತ್ತಿರದ ಸುತ್ತಮುತ್ತಲಿನ ವಸ್ತುಗಳ ಉಪಯೋಗ ಮತ್ತು ಅದರ ಸೇವೆಗೆ ತನ್ನನ್ನು ಮಿತಗೊಳಿಸುವ ಭಾವನೆ, ಅನ್ನದ ಮಹಿಮೆ ಚರಕ ಎಂದು ಕರೆದಿದ್ದಾರೆ. ಸ್ವದೇಶಿ ತತ್ವವೆಂದರೆ ಸ್ವದೇಶಿ ರ್ಥಿಕ ಮತ್ತು ಧರ್ಮಿಕ ವ್ರತ, ಸ್ವದೇಶಿ- ಸ್ವರಾಜ್ಯ ಸಂಬಂಧವಾಗಿದೆ, ಗಾಂಧಿ ಚಿಂತನೆಯ ಪ್ರಧಾನ ವಸ್ತುವಾಗಿದೆ. "ಸ್ವದೇಶಿ ಎಂಬುದು ಜೀವನ ನಿಯಮ. ಸ್ವದೇಶಿ ಸಂಕೇತವಾಗಿ ಖಾದಿಯ ಕಲ್ಪನೆ ಸ್ವದೇಶಿ ಮಾನಸಿಕ ಕ್ರಾಂತಿ ಅದೊಂದು ಪ್ರತಿಜ್ಞಾ ವಾಗ್ದಾನ ಎಂದಿದ್ದಾರೆ. ಗಾಂಧೀಜಿ ಆಗಸ್ಟ 8-1919 ರಂದು ಪೂನದ ಗುಜರಾತಿ ಬಂಧು ಸಭಾದ ಭಾಷಣದಲ್ಲಿ " ನಾನು ಈಗ ಸ್ವದೇಶಿ ವಿಷಯಗಳಿಗೆ ಆದ್ಯತೆ ನೀಡುತ್ತೇನೆ, ನಮಗೆ ಸ್ವರಾಜ್ಯ

ದೊರಕುವುದು ಸ್ವದೇಶಿಯರಿಂದಲೇ ಈ ವಿಚಾರ ಪ್ರಚಾರ ಮಾಡುವುದು ನನ್ನ ಉದ್ದೇಶ ಕೆಲ ದಿನಗಳಲ್ಲಿ ಭಾರತದ ಪ್ರತಿಯೊಬ್ಬರೂ ಸ್ವದೇಶಿಯರಿಂದ ಸ್ವರಾಜ್ಯ ದೊರಕುತ್ತದೆ ಎಂಬುದನ್ನು ಅರಿಯುತ್ತಾರೆ" ಎಂದಿದ್ದಾರೆ. ಅದಕ್ಕಾಗಿ ಸ್ವದೇಶಿ ಪರಿಕಲ್ಪನೆ ಪರಿಶುದ್ಧವಾಗಿ ಇರಬೇಕಾದದ್ದು ಅತ್ಯವಶ್ಯಕವೆಂದು ಸ್ವದೇಶಿ ಯನ್ನು ಅನಿವರ್ಯವಾಗಿಸುವ ಅಂಶಗಳೆಂದರೆ ರೋಗ-ರುಜಿನೆ, ಹಸಿವು ಮತ್ತು ಬಟ್ಟೆಯ ಕೊರತೆ. ಇಂದಿರುವಂತಹ ರೋಗ-ರುಜಿನೆಗಳನ್ನು ಭಾರತ ಹಿಂದೆಂದೂ ಕಂಡಿರಲಿಲ್ಲ. ಈ ದೇಶದಲ್ಲಿ ರೋಗದಿಂದ ಬಳಲುತ್ತಿರುವವರ ಸಂಖ್ಯೆ ಅನ್ಯ ದೇಶಗಳಿಗಿಂತ ಅಧಿಕವಾಗಿದೆ. ಕಳೆದ 40 ವರ್ಷಗಳಿಗಿಂತ ಇಂದು ಪರಿಸ್ಥಿತಿ ಹದಗೆಟ್ಟಿದೆ ಬಟ್ಟೆಗೆ ಬರವಿದೆಯೆಂದು ತಿಳಿಸಿದರು. ದೀನ್ ಷಾ ವಾಚರ ಅಂದಿನ ಅಂದಾಜಿನಂತೆ ನಾಲ್ಕು ವರ್ಷಗಳ ಹಿಂದೆ ಭಾರತದಲ್ಲಿ ತಲಾ 13 ಗಜ ಬಟ್ಟೆ ಸಿಗುತ್ತಿದ್ದು, ಈಗ ಅದು ತಲಾ 9 ಗಜ ಮಾತ್ರ ಅಂದರೆ ದಿನೇ ದಿನೇ ಕೊರತೆ ಹೆಚ್ಚುತ್ತಿದೆ, ಗಾಂಧೀಜಿ ಚಂಪಾರಣ್ ನಲ್ಲಿ ಗಮನಿಸಿದಂತೆ ಅಲ್ಲಿನ ಮಹಿಳೆಯರಿಗೆ ಕೈಕಾಲು ಮುಚ್ಚಿಕೊಳ್ಳಲು ಬಟ್ಟೆ ಇಲ್ಲ ಇನ್ನು ಶುಚಿತ್ವವೆಲ್ಲಿ ಇಂಥ ಸೋದರಿಯರ ಸ್ಥಿತಿ ಕಂಡು ಮನಕರಗಿತು ಎಂದಿದ್ದಾರೆ. ಸಮಸ್ಯೆಗಳಿಂದ ಬಳಲುತ್ತಿರುವ ದೇಶ ಧರ್ಯ, ಶ್ರಮ ಸಹಿಷ್ಣತೆಗಳನ್ನು ಕಳೆದುಕೊಂಡು ರ್ಮಹೀನವಾಗುತ್ತದೆ. ವ್ಯಕ್ತಿ ರ್ಮ ಪಾಲನೆ ಕಷ್ಟ ಸಾಧ್ಯ ಅದರಲ್ಲೂ ಸಾಮಾನ್ಯರಿಂದ ಈ ಕರ್ಯ ಅಸಾಧ್ಯ ವೆಂದು, ಆತ್ಮ ಶುದ್ದತೆಯ ಜೊತೆಗೆ ದೈಹಿಕ ಶುದ್ದತೆ ಅಗತ್ಯ ಶುದ್ದ ಆತ್ಮವೊಂದು ಶುದ್ದ ದೇಹದಲ್ಲಿ ಮಾತ್ರ ಇರಲು ಸಾಧ್ಯ. ರೋಗ, ಹಸಿವು ಮತ್ತು ಬಟ್ಟೆ ಕೊರತೆ ಈ ತ್ರಿವಳಿ ಸಮಸ್ಯೆಗಳನ್ನು ನಿರ್ಮೂಲನೆ ಮಾಡಬೇಕು. ರೋಗ ಮನಗೊಳಿಸಲು ಸಮಯ ನೀಡಬೇಕು ಹಸಿವು ಸೋಮಾರಿತನದಿಂದಲೂ ಅಥವಾ ಬಡತನದಿಂದಲೂ ಎಂದು ಪರಿಶೀಲಿಸಬೇಕು. ಏಕೆಂದರೆ ಭಾರತದಲ್ಲಿ ಆಹಾರ ಹೇರಳವಾಗಿದೆ ಅದು ಹಸಿದವರಿಗೆ ದೊರಕಬೇಕು ಹಾಗೆ ಮಾಡಬೇಕಾದರೆ ಹಣ ಬೇಕು ಹಣದ ಕೊರತೆ ಇರುವುದು ಹಣದ ಹೊರ ಹರಿವಿನಿಂದ. ಈ ದುಃಸ್ಥಿತಿ ನಿವಾರಿಸಲು ಸ್ವದೇಶಿ ಬೇಕು. ಸ್ವದೇಶಿ ಎಂದರೆ, ನಮ್ಮ ಹತ್ತಿ ಮತ್ತು ರೇಷ್ಮೆ ರಕ್ಷಿಸಿಕೊಳ್ಳುವುದು ಆರ್ಥಿಕ ಹಾಗೂ ಉದ್ಯೋಗಿಕ ಕ್ಷೇತ್ರದಲ್ಲಿ ಸ್ವದೇಶಿ ತತ್ವ ಕೈಬಿಟ್ಟಿದ್ದರಿಂದಲೇ ಕಡುಬಡತನ ಒದಗಿದೆ 150 ವರ್ಷಗಳ ಕೆಳಗೆ ಸ್ವಾವಲಂಬಿತನ ಪಡೆದಿದ್ದ ಹಳ್ಳಿಗಳು ಇಂದು ದಿವಾಳಿಯಾಗಿವೆ. ಮಹಿಳೆಯರು ಇಂದೇ ಇದನ್ನು ದೇವರ ಕೆಲಸವೆಂದು ತಿಳಿದು ತಮ್ಮ ಬಟ್ಟೆ ತಾವೇ ತಯಾರಿಸಿ ಕೊಳ್ಳುತ್ತಿದ್ದರು ಎಂದು ಅದರ ಅವಶ್ಯಕತೆ ಹೆಚ್ಚಿದ್ದು ಸ್ವದೇಶಿ ತತ್ವವನ್ನು ವ್ರತ ವಾಗಿ ಸ್ವೀಕರಿಸಿದಾಗ ಮಾತ್ರ ದಾರಿದ್ರ್ಯ ನಿವಾರಣೆ ಸಾಧ್ಯ ಎಂದಿದ್ದಾರೆ.

ಹಾಗೆಂದು ಗಾಂಧೀ ಆಮದು ವಿರೋಧಿಯೂ ಅಲ್ಲ ಉದಾಹರಣೆಗೆ ಇಂಗ್ಲೆಂಡಿನಿಂದ ಶಸ್ತ್ರಚಿಕಿತ್ಸಾ ಉಪಕರಣಗಳನ್ನು, ಆಸ್ಟ್ರಿಯದಿಂದ ಪೆನ್ಸಿಲ್ ಗಳನ್ನು ತರಿಸಿಕೊಳ್ಳುತ್ತೇವೆ, ಆದರೆ ಹತ್ತಿ ಬಟ್ಟೆಯನ್ನು ಕೊಳ್ಳುವುದಲ್ಲ ಏಕೆಂದರೆ, ಬಡ ಜನತೆ ನೇಯ್ದ ಬಟ್ಟೆ ನಿರಾಕರಿಸುವುದು ಪಾಪಕರ ಸ್ವದೇಶಿ ಕೈಯಿಂದಲೇ ನೇಯ್ದ ಖಾದಿ ಕೇಂದ್ರ ಬಿಂದು ನಮ್ಮವರನ್ನೇ ನರ್ಲಕ್ಷಿಸಿ ಮನುಕುಲದ ಸೇವೆ ಸಾಧ್ಯವಿಲ್ಲ, ಎಂದಿರುವುದು ಖಾದಿಗೆ ಇರುವ ಮಹತ್ವವನ್ನು ತಿಳಿಸುತ್ತದೆ.

ಮುಂದುವರೆದು ಇತರೆ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತದ 21 ಕೋಟಿ ರೈತರು ನಿರುದ್ಯೋಗಿಗಳಾಗಿದ್ದು ಜೀವನೋಪಾಯಕ್ಕೆ ಪೂರಕವಾಗಿ ಉಪಕಸುಬೊಂದನ್ನು ಕಲ್ಪಿಸುವುದು. ದೇಶದ 1/3 ರಷ್ಟು ಜನ ನಿರುಪಯುಕ್ತವಾಗಿ ಕಾಲ ಕಳೆಯುತ್ತಿದ್ದು ಅವರನ್ನು ತೊಡಗಿಸಿಕೊಂಡರೆ ತಮ್ಮ ಅಗತ್ಯಕಷ್ಟೇ ಅಲ್ಲದೆ ವಿದೇಶಕ್ಕೆ ಹರಿದು ಹೋಗುತ್ತಿರುವ ಕೋಟ್ಯಂತರ ರೂಪಾಯಿಗಳನ್ನು ಉಳಿಸಿ, ದೇಶದ ರ್ಥಿಕ ಏಳಿಗೆಗೆ ಸಹಾಯಕಾರಿಯಾಗಬಹುದೆಂದು, ನೇಯ್ಗೆಯನ್ನು ಸಂಸ್ಕೃತ ಸ್ತ್ರೀ ಪುರುಷರು ಆರಂಭಿಸಿದಲ್ಲಿ ಸಾಮಾನ್ಯರು ಅನುಸರಿಸುತ್ತಾರೆ ಎಂದು ಭಾವಿಸಿದ್ದ, ಗಾಂಧಿ ಶ್ರೀಮಂತರ ಪ್ರಭಾವಿಗಳ ಗಣ್ಯರ ಬೆಂಬಲ ಕೋರಿದರು ಉದಾಹರಣೆಗೆ ಲೇಡಿ ಡೋರಬ್ , ಟಾಟಾ ಲೇಡಿ, ಪೇಟಿಟ್, ಜೈಜಿ ಪಟಿಟ್ ಮೊದಲಾದವರು.

ಭಾರತದ ಬಹುಸಂಖ್ಯಾತ ಜನರು ರೈತರಾಗಿದ್ದು ಬಡತನದಿಂದ ಮುಕ್ತಗೊಳಿಸಲು ಪೂರಕ ಕಸುಬುಗಳಾದ ನೂಲುವುದು ಮತ್ತು ನೇಯ್ಗೆಗಳನ್ನು ಮಾಡಬೇಕು. ನೇಯ್ಗೆ ಇಲ್ಲಿನ ಕುಶಲ ಕಲೆಯಾಗಿದ್ದು ಇಲ್ಲಿನ ಮಸ್ಲಿನ್ ಬಟ್ಟೆ ವಿಶ್ವ ಮನ್ನಣೆ ಪಡೆದಿದ್ದು ಇಂದು ನೇಪಥ್ಯಕ್ಕೆ ಸರಿದಿದೆ, ಪುನಹ ಈ ಕಲೆಯನ್ನು ಪುನರಾರಂಭಿಸ

ಬೇಕಾದ ಅಗತ್ಯತೆಯನ್ನು ಮನವರಿಕೆ ಮಾಡುತ್ತಾ, ಸ್ತ್ರೀಯರು ಹಣಕ್ಕಲ್ಲದೆ ದೇಶಕ್ಕಾಗಿ ಕನಿಷ್ಠ ಒಂದು ಗಂಟೆಯಾದರೂ ನೇಯ್ಗೆ ಮಾಡಬೇಕಾಗಿದ್ದು ತಮ್ಮ ಬಟ್ಟೆಗಳನ್ನು ತಾವೇ ನೂತು ತಯಾರಿಸಿಕೊಳ್ಳಬೇಕೆಂದು ಮನವಿ ಮಾಡಿರುವುದು ಅವರಿಗೆ ದೇಶದ ಬಗೆಗಿನ ಕಳಕಳಿ ಮತ್ತು ಕಾಳಜಿಯನ್ನು ತಿಳಸುತ್ತದೆ.

1919 ಆಗಸ್ಟ 31 ರಂದು ಗಾಂಧೀಜಿ ಮಹಿಳೆಯರನ್ನು ಉದ್ದೇಶಿಸಿ "ಗುಜರಾತಿನ ಮಹಿಳೆಯರು ಬಹುತೇಕ ಕೈ ಬಿಟ್ಟಿರುವ ಮಹಾನ್ ರ್ಮ ಸ್ವದೇಶಿ, ಗಂಡಸರು ಪ್ರಾಪಂಚಿಕ ವಿಷಯಗಳಲ್ಲಿ ಮುಳುಗಿರುವಾಗ ಮಗುವನ್ನು ಕಾಪಾಡುವಂತೆ ದೇಶವನ್ನು ಕಾಪಾಡಬೇಕು ದೇಶದ ಏಳ್ಗೆಯಲ್ಲಿ ಮಹಿಳೆಯರ ಏಳ್ಗೆಯಲ್ಲಿದೆ ಹಾಗಾಗಿ ಮಹಿಳೆಯರು ನೂಲುವುದರ ಮೂಲಕ ದೇಶದ ಕುಶಲ ಕರ್ಯಗಳನ್ನು ಪ್ರೋತ್ಸಾಹಿಸಿ ಹಣದ ಹರಿವನ್ನು ತಡೆಯಬೇಕು ಮಹಿಳೆಯರು ನೂತ ನೂಲನ್ನು ಪುರುಷರು ನೇಯ ಬೇಕು ಇದನ್ನು ನರ್ಲಕ್ಷಿಸುವುದರಿಂದ ವಿದೇಶಿಯರನ್ನು ಪ್ರೋತ್ಸಾಹಿಸಿದಂತೆ, ಇದು ರ್ಮ ಬಾಹಿರ ಸಹೋದರಿಯರು ಪ್ರಾಚೀನ ದೇಶಿಯ ಕಸುಬನ್ನು ಪುನರುಜ್ಜೀವನಗೊಳಿಸಬೇಕು ಮಹಿಳೆಯರ ಶ್ರದ್ಧಾಪರ್ವಕವಾಗಿ ಪ್ರಯತ್ನಿಸಬೇಕು ಸ್ವದೇಶಿ ವಸ್ತ್ರ ತೊಡುವ ಪ್ರತಿಜ್ಞೆ ಪ್ರತಿಜ್ಞೆ ಜೊತೆಗೆ ಪ್ರತಿದಿನ ಒಂದಿಷ್ಟು ನೂಲ ಬೇಕು ಆಗ ಆಮದಿನ ಪ್ರಶ್ನೆಯು ಬರುವುದಿಲ್ಲ ಬಟ್ಟೆ ಭಾರವಾಗಿದ್ದರೂ ಒರಟಾಗಿದ್ದರು ಅದರಲ್ಲಿ ತೃಪ್ತಿ ಪಡಬೇಕು" ಎಂದು ಮನವಿ ಮಾಡಿದರು ಹಿಂದು-ಮುಸಲ್ಮಾನರ ನಡುವೆ ಪರಸ್ಪರ ಸೇವಾ ಮನೋಭಾವನೆ ಇರಬೇಕೆಂದು ತಿಳಿಸಿದರು. ಶ್ರೀಮಂತರು ಗಿರಣಿಗಳ ಮೂಲಕ ಮಾಡಿದರೆ ಬಡವರು ಚರಕ ಮತ್ತು ಕೈಮಗ್ಗದಿಂದ ಮೂಲಬಹುದೆಂದು ತಿಳಿಸಿದರು. ಪ್ರತಿಯೊಬ್ಬರು ನೂಲುವುದನ್ನು ಒಂದು ದಿನದಲ್ಲಿ ಕಲಿಯಬಹುದು ನೇಯ್ಗೆಯನ್ನು ಎಂಟು ವಾರಗಳಲ್ಲಿ ಕಲಿಯಬಹುದು, ಚರಕದ ಬೆಲೆ ನಾಲ್ಕರೂಪಾಯಿಗಳು ಕೈಮಗ್ಗಕ್ಕೆ 25 ರಿಂದ 40 ರೂಪಾಯಿಗಳು ಅಲ್ಪ ವೆಚ್ಚದಲ್ಲಿ ನಿರಂತರ ಆದಾಯ ಪಡೆಯಬಹುದೆಂದು ತಿಳಿಸಿದರು. ಗಾಂಧೀಜಿ ಸಂಪರ್ಣ ಸ್ವದೇಶಿಯನ್ನು ಮತ್ತು ಸಂಪರ್ಣ ವಿದೇಶಿ ವಸ್ತುಗಳ ಬಹಿಷ್ಕಾರವನ್ನು ಎಂದು ಪ್ರತಿಪಾದಿಸಿಲ್ಲ, ಗಾಂಧಿಯ ರ್ಥಿಕ ನಿಲುವು ನಮ್ಮಲ್ಲಿ ವಿಫಲವಾಗಿರುವ ರ್ಥಿಕ ವಸ್ತುಗಳ ಆಮದು ಅನಗತ್ಯ ಒಂದು ತಿಳಿಸಿದ್ದಾರೆ. ಉದಾಹರಣೆಗೆ ಆಸ್ಟ್ರೇಲಿಯಾದ ಗೋಧಿ ಉತ್ತಮವಾದದ್ದು ಎಂದು ತರಿಸಿಕೊಳ್ಳುವುದು ಪಾಪ ಆದರೆ, ಸ್ಕಾಟ್ಲೆಂಡಿನ ಓಟ್ ಮಿಲ್ ತರಿಸಿಕೊಳ್ಳಲೇ ಬೇಕೆಂದರೆ ಅದಕ್ಕೆ ನಾನು ಸಿದ್ಧ ಏಕೆಂದರೆ, ಅದು ಭಾರತದಲ್ಲಿ ಬೆಳೆಯುವುದಿಲ್ಲ ಇದರ ರ್ಥ ಗಾಂಧೀಜಿಯ ಸ್ವದೇಶಿ ಸಂಕುಚಿತತೆಯಿಂದ ಕೂಡಿರದೆ, ದೇಶದ ರ್ಥಿಕತೆ ಮತ್ತು ಬಡ ಕೃಷಿ ಕರ್ಮಿಕರ ಹಿತರಕ್ಷಣೆಯನ್ನು ಒಳಗೊಂಡಿದೆ ಎಂಬುದು ಅರಿವಾಗುತ್ತದೆ

ಪ್ರತಿಯೊಬ್ಬ ಸುಶಿಕ್ಷಿತ ಭಾರತೀಯನು ತನ್ನ ಸ್ಪಷ್ಟವಾದ ಮೂಲಭೂತ ರ್ತವ್ಯ ಅರಿತುಕೊಂಡರೆ ಆತ ತನ್ನ ಮನೆ ಮಹಿಳೆಯರಿಗೆ ಚರಕ ಕಾಣಿಕೆಯಾಗಿ ನೀಡುತ್ತಾನೆ. ಹೀಗೆ ಮಾಡುವ ಮೂಲಕ ಭಾರತದ ಗೃಹ ಕೈಗಾರಿಕೆಯನ್ನು ಪುರ್ರುಚಿಸಲು ಸಾಧ್ಯ. ಗೃಹ ಕೈಗಾರಿಕೆಗಳು ಇಲ್ಲದಿದ್ದರೆ ಭಾರತದ ರೈತ ಹಾಳಾದಂತೆ, ಆತ ಬದುಕಲು ಪೂರಕ ಉದ್ಯೋಗ ಬೇಕು ನೂಲುವುದು ಸುಲಭ ಮತ್ತು ಅತ್ಯಗತ್ಯವೆಂದು ತಿಳಿಸಿದರು.

ಮುಂದುವರೆದು ಭಾರತ 1918ರಲ್ಲಿ 60 ಕೋಟಿ ರೂಪಾಯಿಗಳನ್ನು ಒಂದು ರ್ಷದಲ್ಲಿ ಬಟ್ಟೆ ಮೇಲೆ ವ್ಯಯಿಸಿದ್ದು, ಅದೇ ಹಣ ಈ ನೇಕಾರರಿಗೆ ಹರಿಯುವಂತಾದರೆ ಇದು ಸಂಘಟಿತ ರೂಪವನ್ನು ಪಡೆದುಕೊಳ್ಳುತ್ತದೆ ಮತ್ತು ತನ್ನ ಏಳಿಗೆಗೆ ಬೇಕಾದುದ್ದನ್ನು ತಾನೇ ತಯಾರಿಸಿಕೊಳ್ಳುತ್ತದೆ ಬರಿ ಗಿರಣಿಗಳನ್ನು ಹೆಚ್ಚಿಸಿದರೆ ಸಮಸ್ಯೆ ನೀಗದು ನೀವು ಯಶಸ್ವಿಯಾಗಲು ಸಾಕಷ್ಟು ಸಮಯ ಬೇಕು ಹಣ ಮತ್ತು ಪರಿಶ್ರಮಗಳು ಕೇಂದ್ರೀಕೃತವಾಗುವಂತೆ ಮಾಡುತ್ತವೆ ಸ್ವದೇಶಿ ತತ್ವ ಸಮಗ್ರವಾಗಿ ಅಂಗೀಕರಿಸದೆ ದೇಶದ ರ್ಥಿಕ ಸ್ವಾತಂತ್ರ್ಯ ಎಂದಿಗೂ ಸಾಧ್ಯವಿಲ್ಲವೆಂದು ಸ್ವಾವಲಂಬನೆಯ ಮಹತ್ವವನ್ನು ತಿಳಿಸಿದರು. ಗಾಂಧೀಜಿ ಯವರು ಸ್ವದೇಶ ಉತ್ಪನ್ನ ಹೆಚ್ಚಳಕ್ಕೆ ಮೂರು ದಾರಿಗಳನ್ನು ಸೂಚಿಸಿದ್ದು

1.ಹೆಚ್ಚು ಸಂಖ್ಯೆಯಲ್ಲಿ ಮಿಲ್ಲುಗಳನ್ನು ಪ್ರಾರಂಭಿಸುವುದು

2. ವಿದೇಶಿ ನೂಲನ್ನು ಕೊಂಡು ಕೈಮಗ್ಗದಲ್ಲಿ ನೇಯುವುದು

3. ತನ್ನ ದೇಶದಲ್ಲಿಯೇ ತಾನೇ ತೆಗೆದ ಅಥವಾ ಇತರರಿಂದ ಪಡೆದ ನೂಲಿನಿಂದ ಬಟ್ಟೆ ನೇಯುವುದು

ಆದರೆ ವಿದೇಶಿ ನೂಲಿನಿಂದ ನಮ್ಮ ದೇಶದಲ್ಲೇ ತಯಾರಾದ ಬಟ್ಟೆ ಅಷ್ಟೇನೂ ಉಪಯುಕ್ತವಲ್ಲ ಆದರೆ ಅಲ್ಪಮಟ್ಟಿಗಾದರೂ ದೇಶದಿಂದ ಹೊರ ಹೋಗುತ್ತಿರುವ ಹಣವನ್ನು ಉಳಿಸಬಹುದು. ದರ್ಭಕಾಲ ವಿದೇಶಿ ನೂಲನ್ನೆ ಅವಲಂಬಿಸಿದ್ದೆ ಆದರೆ ನಷ್ಟ ಅನುಭವಿಸಬೇಕಾಗುತ್ತದೆ ಇದಕ್ಕೆ ಸ್ವಯಂಸೇವಕರು ಬೇಕು ಹೆಚ್ಚೇನು ವಿದ್ಯೆ ಮತ್ತು ಬುದ್ಧಿವಂತಿಕೆ ಬೇಕಿಲ್ಲ ಬದಲಾಗಿ ದೇಶಪ್ರೇಮ ಪ್ರಾಮಾಣಿಕತೆ ಮತ್ತು ಬದ್ಧತೆ ಬೇಕು. ಇದರಿಂದ ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದು ಅಗತ್ಯಕ್ಕಿಂತ ಹೆಚ್ಚು ಬಟ್ಟೆ ಬಯಸದೆ ಇರುವುದರಲ್ಲಿ ತೃಪ್ತಿಪಡುವ ಗುಣವಿರಬೇಕು ಸ್ವದೇಶಿ ಬಟ್ಟೆ ದೊರೆಯದಿದ್ದರೆ ನಮಗೆ ಕೌಪೀನವೇ ಸಾಕು ಎಂಬ ನರ್ಧಾರಕ್ಕೆ ಬಂದರೆ ಭಾರತ ಉದ್ಧಾರವಾಗುತ್ತದೆ ಎಂಬ ಅಂಶ ಸ್ವಾವಲಂಬನೆ, ದೇಶಪ್ರೇಮ, ಸಾಮಾನ್ಯ ಜ್ಞಾನ ಮತ್ತು ಸರಳತೆಗಳಿದ್ದರೆ ಸಾಧಿಸಬಹುದೆಂಬುದನ್ನು ಸೂಚಿಸುತ್ತದೆ.

ಗಾಂಧೀಜಿಯವರ ಪ್ರಕಾರ ಸ್ವದೇಶಿ ಸಹ ಸತ್ಯಾಗ್ರಹದ ಮನೋಧರ್ಮ ಮತ್ತು ಚಳುವಳಿಯ ಪ್ರತಿಫಲ, ಅದರಲ್ಲಿ ಭಾರತೀಯ ನಾರಿಯರ ಗೌರವವಿದೆ. ಮಿಲ್ಲಿನಲ್ಲಿ ಮಹಿಳೆ ಅಪಾಯದಿಂದ ಮುಕ್ತರಾಗಿ ನೆಮ್ಮದಿಯ ದುಡಿಮೆ ಮಾಡಬಹುದು ಹೆಂಗಸರಿಗೆ ಚರಕಕ್ಕಿಂತ ಉತ್ತಮ ಉದ್ಯೋಗವಿಲ್ಲವೆಂದು ಪ್ರತಿಪಾದಿದ್ದಾರೆ. ಸ್ವದೇಶಿ ಎಂದರೆ ಸಂಪತ್ತಿನ ಸಮಾನ ವಿತರಣೆ ಅದು ಕೃಷಿಯ ನಂತರದ್ದು ದಾರಿದ್ರ್ಯ ನಿವಾರಣೆಗೆ ಸಹಾಯ ಮಾಡುವ ನಮ್ಮ ನಿಜವಾದ ಕಾಮಧೇನು ನಮ್ಮ ಎಲ್ಲಾ ಅಗತ್ಯಗಳನ್ನು ಪೂರೈಸಿ ಜೀವನಧಾರ ಒದಗಿಸುವ ಧಾರ್ಮಿಕ ಕರ್ತವ್ಯವೆಂದಿದ್ದಾರೆ. ಖಾದಿ ಅನುಷ್ಠಾನ ಕುರಿತು ಹೆಂಗಸರು ಗಂಡಸರು ನೂಲುವುದನ್ನು ಕಲಿಯಬೇಕು ಹಣದ ಅಗತ್ಯವಿದ್ದರೆ ಪ್ರತಿಫಲವಾಗಿ ಹಣ ತೆಗೆದುಕೊಳ್ಳಲಿ, ಇಲ್ಲದಿದ್ದರೆ ದಿನಕ್ಕೆ ಒಂದು ಗಂಟೆ ಶ್ರಮವನ್ನಾದರೂ ರಾಷ್ಟ್ರಕ್ಕೆ ರ್ಪಣೆ ಮಾಡಿ ಮನರಂಜನೆಗಾಗಿ ಬಟ್ಟೆಯನ್ನು ಉಪಯೋಗಿಸಿ, ತಮ್ಮ ಮಿತ್ರರಿಗೆ ಪರಿಚಯಿಸಿ ಬಡ ಸಹೋದರಿಯರಿಂದ ತಯಾರಾದ ಖಾದಿ ಬಟ್ಟೆಯಲ್ಲಿ ಕಲೆ ಮತ್ತು ಮಾನವತೆಯಿದೆ ಎಂದು ಮಹಿಳೆಯರಿಗೆ ಸ್ವದೇಶಿ ಅನುಷ್ಠಾನದ ಬಗ್ಗೆ ತಿಳಿಸುತ್ತಾ ನೀವು ಒಬ್ಬ ತಾಯಿಯಾಗಿದ್ದರೆ ನಿಮ್ಮ ಮಗಳಿಗೆ ಶುದ್ಧ ರಾಷ್ಟ್ರೀಯ ಸಂಸ್ಕೃತಿ ಕಲಿಸಿ ಖಾದಿ ತೋಡಿಸಿ ಅದರ ಬಗ್ಗೆ ತಿಳಿಸಿ ಹೀಗೆ ಸ್ವದೇಶಿ ಎಂದರೆ ಒಂದು ಪರಿಪೂರ್ಣ ವ್ಯವಸ್ಥೆಯ ನಿರ್ಮಾಣ ಪ್ರತಿಯೊಬ್ಬರು ಸೌಹಾರ್ದತೆಯಿಂದ ತೊಡಗಿಕೊಂಡಲ್ಲಿ ಸ್ವದೇಶಿ ಯಶಸ್ವಿಯಾಗಿ ನಿಜವಾದ ಸ್ವರಾಜ್ಯ ನಮಗೆ ಲಭಿಸುತ್ತದೆ ಎಂಬುದು ಗಾಂಧೀಜಿಯವರ ಆಶಯವಾಗಿತ್ತು.

ಈ ಚಳುವಳಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರವು ವಹಿಸದೆ ಹೋದರೆ ಅದು ನಿಧಾನಗೊಳ್ಳುತ್ತದೆ ಕಾರಣ ಬಹುಪಾಲು ನೂಲುವವರು ಮಹಿಳೆಯರು ಅವರಲ್ಲಿ ರಾಷ್ಟ್ರದ ಅನಂತ ನಿಧಿ ಇದೆ ಆ ನಿಧಿಯನ್ನು ಬಳಸಿದರೆ ರಾಷ್ಟ್ರಸೇವೆ ಮಾಡಿದಂತೆ ಎಂದು ಮಹಿಳೆಯರಿಗೆ ಕರೆ ನೀಡಿದರು, ಒದು ಮಹಿಳೆಯರ ಪಾಲ್ಗೊಳ್ಳುವಿಕೆಯ ಮಹತ್ವವನ್ನು ತಿಳಿಸುತ್ತದೆ. ಬಿಡುವಿನ ಸಮಯದ ಸಮಯದಲ್ಲಿ ದೇವಾಲಯಕ್ಕೆ ಹೋಗಿ ಕಾಲ ಕಳೆಯುವುದು ರ್ಥ ಆದರೆ ನಿಮ್ಮ ಬಟ್ಟೆಗಾಗಿ ನೀವು ಕೆಲಸ ಮಾಡುವುದು ನಿಜವಾದ ಭಕ್ತಿ ನೂಲುವ ಚರಕ ಬರಗಾಲದ ವಿಮೆಯೆಂದು ಶರಣರ ಕಾಯಕ ತತ್ವವನ್ನು ಎತ್ತಿ ಹಿಡಿದಿದ್ದಾರೆ. ಹಾಗೆ ಖಾದಿ ಬೆಲೆಯನ್ನು ಸ್ಥಿರಗೊಳಿಸಬೇಕಾದರೆ ಬೆಳೆಗಾರರೊಡನೆ ಸಂಪರ್ಕ ಸಾಧಿಸಿ ನೇರವಾಗಿ ನಮ್ಮೊಂದಿಗೆ ವ್ಯವಹರಿಸುವಂತೆ ಉತ್ತೇಜಿಸಬೇಕು, ಸರ್ವರಿಗೂ ಸಮಾನತೆಯನ್ನು ಸಾಧಿಸುವುದು ಖಾದಿ ರ್ಥಶಾಸ್ತ್ರದ ನೀತಿಯೆಂದು ಹಾಗೂ ದರಿದ್ರರ ನಿಸ್ಸಾಹಾಯಕರ ಹಿತಕ್ಕಾಗಿ ಸ್ವಯಂಸೇವಕರು ಜನತೆಯೊಂದಿಗೆ ಬೆರೆತಾಗ ಖಾದಿ ಯಶಸ್ವಿಯಾಗುತ್ತದೆ ತಿಳಿಸಿದರು.

**ಖಾದಿ :-**

ಖಾದಿ ಅಥವಾ ಖದ್ದರ್ ರಾಟೆಯಿಂದ ನೇಯ್ದ ಹತ್ತಿ, ಉಣ್ಣೆ ಮತ್ತು ರೇಷ್ಮೆ ನೂಲಿನ ವಸ್ತ್ರ ಇದು ಬರಿ ವಸ್ತ್ರವಲ್ಲ ಭಾರತದ ಭವಿಷ್ಯದ ಸೂಚಕವೆಂದು ಗಾಂಧೀಜಿ ಬಾವಿಸಿದ್ದರು. ಆಧುನಿಕ ಆವಿಷ್ಕಾರಗಳು ಹಳ್ಳಿಯ ಗುಡಿ ಕೈಗಾರಿಕೆಗಳನ್ನು ನಾಶಪಡಿಸಿ ಹಳ್ಳಿಗಳನ್ನು ದರಿದ್ರನ್ನಾಗಿಸಿದ್ದು, ಯಾವ ದಾಳಿಗಾರರು ಗ್ರಾಮ ವಿನಾಶವನ್ನು ಮಾಡಲು ಸಾಧ್ಯವಿಲ್ಲ ಆದರೆ ಹಳ್ಳಿಗಳು ತಮ್ಮ ನಾಶವನ್ನು ತಾವೇ ಮಾಡಿಕೊಳ್ಳುತ್ತಿದ್ದು ಕೃಷಿ ಲಾಭ ರಹಿತವಾಗಿದೆ, ಇಂತಹ ಕೃಷಿ ಕರ್ಮಿಕರು ಕುಶಲರ್ಮಿಗಳಿಗೆ ಇರುವ ಆರ್ಥಿಕ ಕಾರ್ಯಕ್ರಮ ಖಾದಿ ಮತ್ತು

ಚರಕ ಎಂದು ಗಾಂಧೀಜಿ ಕರೆ ನೀಡಿದರು. 16 ವರ್ಷ ದಾಟಿದ ಎಲ್ಲಾ ಭಾರತೀಯ ಸ್ತ್ರೀ ಪುರುಷರಿಗೆ ಉದ್ಯೋಗ ನೀಡಬೇಕು ಅದಕ್ಕಾಗಿ ಇರುವ ಒಂದು ಆರ್ಥಿಕ ಕಾರ್ಯಕ್ರಮ ಖಾದಿ, ಸಾಮಾನ್ಯ ಆರ್ಥಶಾಸ್ತ್ರಕ್ಕಿಂತ ಖಾದಿ ಆರ್ಥಶಾಸ್ತ್ರ ಬಿನ್ನವೆಂದು ಇದು ಮಾನವ ಅಂಶಕ್ಕೆ ಸಂಬಂಧಿಸಿದ್ದು ಖಾದಿಯ ನೇಕಾರರು ಈ ನಿಯಮಗಳ ಪಾಲನೆಯನ್ನು ಮಾಡುವುದು ಎಂದೆಂದಿಗಿಂತಲೂ ಇಂದು ಅಗತ್ಯವಾಗಿದೆಯೆಂದು ತಿಳಿಸಿದರು. ಸಾಮಾನ್ಯ ಆರ್ಥಶಾಸ್ತ್ರದಂತೆ ಉತ್ಪಾದಿತ ಉತ್ಪನ್ನವನ್ನು ಮಾರಾಟಕ್ಕಾಗಿ ಜಗತ್ತಿನ ಬೇರೆಡೆಗೆಲ್ಲ ಕಳುಹಿಸುತ್ತಾರೆ ಆದರೆ ಇಲ್ಲಿ ಉತ್ಪಾದನೆಯದ ಉತ್ಪನ್ನಗಳನ್ನು ಇಲ್ಲಿಯೇ ಉಪಯೋಗ ಮಾಡಬೇಕು ಆಗ ಮಾತ್ರ ಖಾದಿಗೆ ಬೇಡಿಕೆ ಹೆಚ್ಚುತ್ತದೆ ಇದಕ್ಕಾಗಿ ಗಾಂಧಿ ಚರಕ ಸಂಘಗಳನ್ನು ಸ್ಥಾಪಿಸಿದರು.ನೂಲಿಗೆ ಬೇಕಾದ ಹತ್ತಿಯನ್ನು ಬೆಳೆಯಲು ಉತ್ತೇಜಿಸಬೇಕೆಂದು, ಹೇಗೆ ತಮಗೆ ಬೇಕಾದ ತರಕಾರಿಯನ್ನು ಬೆಳೆಯುತ್ತಾರೋ ಹಾಗೆ ಹತ್ತಿಯನ್ನು ಬೆಳೆಯಲು ಉತ್ತೇಜನ ಕೊಡಬೇಕು ಆಗ ಖಾದಿ ಆಗ್ನವಾಗುತ್ತದೆ ಮತ್ತು ಪ್ರಭುತ್ವದ ರಕ್ಷಣೆಯಿಂದ ಅಥವಾ ಸ್ವಪ್ರಯತ್ನದ ಮೂಲಕ ಜನ ಖಾದಿಯನ್ನು ಬಳಸುವ ಅಭ್ಯಾಸ ಮಾಡಿಕೊಂಡರೆ ಹಣದ ದೃಷ್ಟಿಯಿಂದ ಅದನ್ನೆಂದು ಪರಿಗಣಿಸುವುದಿಲ್ಲವೆಂದು, ಸ್ವಾವಲಂಬಿ ಖಾದಿ ಎಂದರೆ ತಮಗಾಗಿಯೇ ಹಳ್ಳಿಗಳಲ್ಲಿ ನೂಲು ತೆಗೆದು ಸಾಧ್ಯವಿದ್ದಲ್ಲಿ ಅದೇ ಹಳ್ಳಿಗಳಲ್ಲಿ ಬೆಳೆದ ಅಲ್ಲೇ ಹಿಂಜಲ್ಪಟ್ಟ ಹತ್ತಿಯಿಂದಾದುದು ಖಾದಿ ಹಾಗೂ ಅದೇ ನಿಜವಾದ ದೀಕ್ಷೆಯೆಂದು ಮನಗಂಡಿದ್ದರು.ಇದುವರೆಗೂ ರೈತರ ಬೆಳೆಗಳಿಗೆ ಉತ್ತಮವಾದ ಬೆಲೆಗಳು ಸಿಕ್ಕಿಲ್ಲ ಅದು ಅವರ ತಪ್ಪಲ್ಲ ಕರ್ಯರ್ತರು ಇದನ್ನು ಅರಿಯಲಿಲ್ಲವೆಂದು, ನಗರದವರು ಖಾದಿ ಧರಿಸಿ ತಪಸ್ಯ ಮಾಡಬೇಕಾಗಿ ಬಂತೆಂದು ಸುಲಭವಾಗಿ ನಾಲ್ಕು ರೂಪಾಯಿ ಹೆಚ್ಚು ಕೊಟ್ಟು ತಪಸ್ಸನ್ನು ಕೊಂಡು ದೇಶಭಕ್ತರೆನಿಸಿಕೊಂಡರು ಅದೇ ರೀತಿ ಹಳ್ಳಿಗರು ಖಾದಿದಾರಿಗಳಾಗುವಂತೆ ಮಾಡಿದಾಗ ಮಾತ್ರ ಭಾರತದಲ್ಲಿ ಏಕವಸ್ತ್ರ ಖಾದಿಯೇ ಆಗುತ್ತದೆಯೆಂದು ತಿಳಿಸಿದರು.

ಯಂತ್ರ ಯುಗದಲ್ಲಿ 40 ಕೋಟಿ ಜನರ ಮನಸ್ಸಿನೊಡನೆ ವ್ಯವಹರಿಸುವ ಶಾಸ್ತ್ರ ಚರಕ ಗುಲಾಮಗಿರಿಯ ಸಂಕೇತವಾಗಿದ್ದ ಕತ್ತಲೆಯುಗಕ್ಕೆ ಹಿಂತಿರುಗುವ ಪ್ರಯತ್ನ ಇದಲ್ಲ, ಚರಕದ ಮೂಲಕ ತನ್ನ ಬಂಧನವನ್ನು ಕಿತ್ತೆಸೆಯುವ ಪ್ರಯತ್ನವೆಂದು, ಸ್ವಾತಂತ್ರ ಮನುಷ್ಯನು ಗುಲಾಮನೋ ಒಂದೇ ಅನ್ನ ತಿನ್ನುತ್ತಿದ್ದಾರೆ ಒಬ್ಬ ಸ್ವಾತಂತ್ರ್ಯದ ಅನ್ನ ತಿಂದರೆ ಮತ್ತೊಬ್ಬ ದಾಸ್ಯದ ಊಟ ಮಾಡುತ್ತಾನೆಂದು, ನಗರವಾಸಿಗಳು ಚರಕದ ಮಹತ್ವವನ್ನು ಅರಿತಾಗ ಕುಡಿತ ಜೂಜು ಮೊದಲಾದಂತಹ ಕಾಲಹರಣದ ಕೃತ್ಯಗಳನ್ನು ಬಿಟ್ಟು ನೇಯ್ಗೆಯಲ್ಲಿ ತೊಡಗಿಸಿಕೊಂಡರೆ ತನ್ನ ಅಭಿವೃದ್ದಿಯ ಜೊತೆಗೆ ದೇಶದ ಅಭಿವೃದ್ದಿಯು ಆಗುತ್ತದ್ದೆಂದು ಸ್ವಸ್ಥ ಸಮಾಜದ ರಚನೆಯಾಗುತ್ತದೆಂದು ಮನಗಂಡಿದ್ದರು. ಗ್ರಾಮ ಉದ್ಯೋಗಗಳು ನಿರ್ಮಾಣಗೊಂಡರೆ ಭಾರತದ 7 ಲಕ್ಷ ಹಳ್ಳಿಗಳ ಅಭಿವೃದ್ದಿಯು ಪೂರ್ಣಗೊಳ್ಳುತ್ತದೆಯೆಂದು ಬಾವಿಸಿದ್ದರು. ಮಾನವ ಹೇಗೆ ಸಂಶೋಧನೆಗಳನ್ನು ಮಾಡುತ್ತಾನೋ ಹಾಗೆ ವಿಮೋಚನೆಗೂ ಪ್ರಯತ್ನಿಸಬೇಕು ಮಾನವ ಸಂಪನ್ಮೂಲ ಯಥೇಚ್ಛವಾಗಿರುವುದರಿಂದ ಯಾಂತ್ರೀಕರಣ ಅಗತ್ಯವಿಲ್ಲ ಪ್ರತಿ ಗಿರಣಿಯು ಹಳ್ಳಿಗರಿಗೆ ಒಂದು ಪಿಡುಗು ಗ್ರಾಮಗಳಿಗೆ ಉದ್ಯೋಗ ನೀಡುವುದು ಯಾಂತ್ರೀಕರಣದಿಂದಲ್ಲವೆಂದು ವಿಜ್ಞಾನದ ಅವಿಷ್ಕಾರಗಳನ್ನು ನಿರಾಕರಿಸಿದರು. ಇಂದಿನ ತನಕ ಅವಲಂಬಿಸಿರುವ ಪ್ರಾಚೀನ ಕಸುಬುಗಳನ್ನು ಪುನರುಜ್ಜೀವನಗೊಳಿಸುವುದು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕೆಲಸವೆಂದು ಮನವರಿಕೆ ಮಾಡಿಕೊಟ್ಟರು. ಖಾದಿ ಗ್ರಾಮ ಗ್ರಹಮಂಡಲದ ಸೂರ್ಯನೆಂದು, ವಿವಿಧ ಉದ್ಯೋಗಗಳು ಅದಕ್ಕೆ ಬೆಂಬಲ ನೀಡುವ ಉಪಗ್ರಹಗಳು ಎಂದು ಖಾದಿಯ ಮಹತ್ವವನ್ನು ಸಾರಿದರು. ಖಾದಿ ಇಲ್ಲದೆ ಇತರ ಉದ್ಯೋಗಗಳು ಬೆಳೆಯಲಾರವು ಖಾದಿ ಗ್ರಾಮ ಚಟುವಟಿಕೆಗಳ ಕೇಂದ್ರ ಬಿಂದು, ಹಳ್ಳಿಗಳಲ್ಲಿ ಕೂತು ಯೋಜಿಸದ ಹೊರತು ನಶಿಸಿರುವ ಉದ್ಯೋಗಗಳನ್ನು ಪಟ್ಟಿ ಮಾಡುವುದು ಸಾಧ್ಯವಿಲ್ಲ ಹಳ್ಳಿಗಳಿಗೆ ಮರಳಿ ಉದ್ಯೋಗಗಳನ್ನು ಕೈಗೊಳ್ಳುವ ಮೂಲಕ ಗ್ರಾಮೋದ್ಧಾರಗಳನ್ನು ಮಾಡಬೇಕೆಂದು ದೃಢವಾಗಿ ನಂಬಿದ್ದರು.

ಈ ಮೇಲಿನ ಅಂಶಗಳಿಂದ ಗಾಂಧೀಜಿಯವರು ಸ್ವದೇಶಿ, ಖಾದಿ, ಚರಕಗಳ ಮೂಲಕ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ರ್ಥಿಕ ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿದರು.ಈ ಮೂಲಕ ಗಾಂಧೀಜಿ ಸರ್ಥ ಸಂಘಟನಾ ಚತುರನಷ್ಟೇ ಅಲ್ಲದೆ ಸರ್ಥ ರ್ಥಶಾಸ್ತ್ರಜ್ಞನರೆಂದು ತಿಳಿಯುತ್ತದೆ. ಭಾರತದಂತಹ ಮಾನವ ಸಂಪನ್ಮೂಲ ಅಧಿಕವಿರುವ ದೇಶಕ್ಕೆ ಯಾಂತ್ರೀಕೃತ ಕೈಗಾರಿಕೆಗಳನ್ನು ನಿರಾಕರಿಸಿದ್ದಾರೆ. ಪ್ರಾಚೀನ ಗುಡಿಕೈಗಾರಿಕೆಗಳ

ಮೂಲಕ ಸ್ತ್ರೀ- ಪುರುಷರಿಬ್ಬರಿಗೂ ಸಮಾನವಾಗಿ ಉದ್ಯೋಗ ಒದಗಿಸಬಹುದೆಂದು ಅಂದೇ ಮನಗಂಡಿದ್ದರು. ಗ್ರಾಮಗಳ ಉದ್ದಾರದ ಮೂಲಕ ದೇಶದ ಉದ್ದಾರದ ಕನಸನ್ನು ಕಂಡಿದ್ದರು.

ಪರಾರ್ಶ್ಯನ ಗ್ರಂಥಗ

1. ಮಹಾತ್ಮ ಗಾಂಧಿ ಕೃತಿ ಸಂಚಯ, ಸಂಪುಟ -15 ಭಾರತೀಯ ವಿದ್ಯಾ ಭವನ ಬೆಂಗಳೂರು

2. ಮಹಾತ್ಮ ಗಾಂಧಿ ಕೃತಿ ಸಂಚಯ ಸಂಪುಟ 16 ಭಾರತೀಯ ವಿದ್ಯಾ ಭವನ ಬೆಂಗಳೂರು

3. ಮಹಾತ್ಮ ಗಾಂಧಿ ಕೃತಿ ಸಂಚಯ ಸಂಪುಟ 17 ಭಾರತೀಯ ವಿದ್ಯಾ ಭವನ ಬೆಂಗಳೂರು

4. works of Gandhiji in Kannada , vol- 8, ಗಾಂಧೀ ಸ್ಮಾರಕ ನಿಧಿ ರ್ನಾಟಕ ಶಾಖೆ -1959

5. ಗಾಂಧೀಜಿಯವರ ರ್ಧವಿಚಾರ, ರ್ಥಿಕ ಚಿಂತನೆ, ಗಾಂಧಿ ಸ್ಮಾರಕ ನಿಧಿ, ರ್ನಾಟಕ ಶಾಖೆ - ಬೆಂಗಳೂರು